# ಮಕ್ಕಳೂ, ಪ್ರಶ್ನೆಗಳೂ!



**ಶಿಕ್ಷಣದಲ್ಲಿ ಮಕ್ಕಳ ಪ್ರಶ್ನೆ ಒಂದು ಕ್ರಾಂತಿಯಾಗಿ ಶಾಲಾ ಕಾಲೇಜುಗಳಲ್ಲಿ ಆರಂಭವಾಗಬೇಕು. ಈ ಪ್ರಶ್ನಾವಳಿ ಪ್ರಯೋಗ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಇಡಬೇಕು. ಶಿಕ್ಷಕರು ಪಠ್ಯದ ಜೊತೆಗೆ ಈ ಪ್ರಶ್ನೆಗಳ ಮೂಲ ಉದ್ದೇಶಗಳನ್ನು ಮಕ್ಕಳಿಗೆ ತಿಳಿಸಬೇಕು.**

**■ ಡಾ. ಎಂ. ಸತ್ಯನಾರಾಯಣರಾವ್**

ಆರರಿಂದ ಇಪ್ಪತ್ತಾರರವರೆಗೆ ಎಲ್ಲರೂ ಮಕ್ಕಳೇ! ಬೇರೆಯವರ ಪಾಲಿಗೆ ಹೇಗೋ ಏನೋ, ಪೋಷಕರ ಪಾಲಿಗಂತೂ ಅವರು ಮಕ್ಕಳೇ ! ಮಕ್ಕಳು ಓದಿ, ಬೆಳೆದು ಜೀವನದಲ್ಲಿ ಸ್ಥಿರವಾಗಿ ನಿಲ್ಲಲು ಕೊನೆಯ ಪಕ್ಷ ಇಪ್ಪತ್ತಾರು ಬೇಕೇ ಬೇಕು! ಅದುವರೆವಿಗೆ ಅವರು ಪ್ರತಿಯೊಂದಕ್ಕೂ, ಹಣ, ಫೀಸು, ಬಟ್ಟೆ, ಬರೆ, ವಸ್ತು –ಹೀಗೆ ಎಲ್ಲದ್ದಕ್ಕೂ ಪೋಷಕರ ಮೇಲೆ ಅವಲಂಬಿಸಿಯೇ ಇರಬೇಕು. ಮಕ್ಕಳಲ್ಲಿ ನಾಲ್ಕು ಹಂತಗಳು: 6ರಿಂದ 8ರ ವಯಸ್ಸು, 10ರಿಂದ 12ರ ವಯಸ್ಸು, 16 ರಿಂದ 18ರ ವಯಸ್ಸು ಮತ್ತು 22 ರಿಂದ 26ರ ವಯಸ್ಸು. ಇವುಗಳಲ್ಲಿ ಅಮಾಯಕ ಹಾಗೂ ಸೂಕ್ಷ್ಮ ವಯಸ್ಸು 6ರಿಂದ 8.

ಒಂದು ಅಧ್ಯಯನದ ಪ್ರಕಾರ ಮಕ್ಕಳು ಅನುಭವವಿಲ್ಲದಿದ್ದರೂ, ಹೆಚ್ಚು ಪ್ರಜ್ಞಾವಂತರಾಗಿರುವುದು 6 ರಿಂದ 8ರಲ್ಲೇ. ಅವರಿಗದು ಆ ವಯಸ್ಸಿನಲ್ಲಿ ಪರಿಶುದ್ಧ ಪ್ರಜ್ಞೆ! ಕಪಟ, ಕಲ್ಮಷ, ಕ್ರೂರತನವಿಲ್ಲದ, ಎಲ್ಲವನ್ನೂ ನಂಬುವ, ಎಲ್ಲರೂ ಒಳ್ಳೆಯವರೇ ಎಂದು ನಂಬುವ ಒಳ್ಳೆಯ ಪ್ರಜ್ಞೆ. ಅವರದು ಬಿಚ್ಚು ಮಾತು. ದಿಟ್ಟ, ನೇರ, ಚೂಟಿ, ಚಾಟಿ ಏಟಿನ ಮಾತು. ಆ ವಯಸ್ಸಿಗೆ ಅವರು ಹಿರಿಯರ ನಡೆ ನುಡಿ ವ್ಯವಹಾರ ಗಮನಿಸುತ್ತಾರೆ, ಗ್ರಹಿಸುತ್ತಾರೆ. ತಮ್ಮ ಶಾಲಾ ಸಹಪಾಠಿಗಳಿಂದ, ಅಕ್ಕ ಪಕ್ಕದ ಸಮವಯಸ್ಕ ಮಕ್ಕಳಿಂದ ವಿಷಯ ಕೇಳಿಸಿಕೊಳ್ಳುತ್ತಾರೆ.

ಅವಕ್ಕೆ ಅದೆಷ್ಟು ಅರ್ಥವಾಗುತ್ತದೆಯೋ ಅದು ಬೇರೆಯೇ ವಿಷಯ. ಒಮ್ಮೊಮ್ಮೆ ಅವರು ತಮ್ಮ ಪೋಷಕರನ್ನು ಕೇಳುವ ಪ್ರಶ್ನೆಗಳು ಈಟಿ ಏಟಿನಂತಿರುತ್ತದೆ. ಅವುಗಳಿಗೆ ಉತ್ತರಿಸಲು ಪೋಷಕರಿಗೆ ಮುಜುಗರವಾಗಬಹುದು, ಕಷ್ಟವಾಗಬಹುದು. ಎಷ್ಟೋ ವೇಳೆ ಉತ್ತರಿಸ–ಲಾಗದು ಕೂಡಾ. ಅವರ ಪ್ರಶ್ನೆಗಳಿಗೆ ಸುಳ್ಳು ಉತ್ತರ ಹೇಳಬಹುದು. ಹಟ ಹಿಡಿದರೆ ಹೆದರಿಸಿ ಬೆದರಿಸಿ, ತಲೆಹರಟೆ ಎಂದೋ, ಮೊದಲು ದೊಡ್ಡವನಾಗು ಎಂದೋ ಹೇಳಿ ಬಾಯಿ ಮುಚ್ಚಿಸಲು ಪ್ರಯತ್ನಿಸುತ್ತೇವೆ.

ಪೋಷಕರು ಶಿಕ್ಷಕರಾಗಿರಬಹುದು, ಆರಕ್ಷಕರಾಗಿರಬಹುದು; ಮಾಲಿಯಾಗಿರಬಹುದು, ಮಂತ್ರಿಯಾಗಿರಬಹುದು; ಕಾರಕೂನನಾಗಿರ–ಬಹುದು, ಕಾರ್ಮಿಕನಾಗಿರಬಹುದು; ವೈದ್ಯನಾಗಿರಬಹುದು, ಪಶುವೈದ್ಯ–ನಾಗಿರಬಹುದು; ಅಧಿಕಾರಿಯಾಗಿರಬಹುದು, ಆಟೋಕಾರನಾಗಿರಬಹುದು; ಇಂಜಿನಿಯರ್ ಆಗಿರಬಹುದು, ಇಡ್ಲಿ ಮಾರುವವನಿರಬಹುದು; ಏನೇ ಆಗಿರಲಿ, ಮನೆಯಲ್ಲಿ ಪೋಷಕರು ಪೋಷಕರೇ. ಮಕ್ಕಳು ಶಾಲಾ ಮಕ್ಕಳಿರ–ಬಹುದು, ಕಾಲೇಜು ಮಕ್ಕಳಿರಬಹುದು ಮನೆಯಲ್ಲಿ ಮಕ್ಕಳು ಮಕ್ಕಳೇ !

ಮಕ್ಕಳೇ ನಿಮಗೆ ಗೊತ್ತಿದೆಯಾ? ನೀವು ನೌಕರಿಯಲ್ಲಿಲ್ಲ. ಆದರೂ ಸರ್ಕಾರ, ಸಂಸ್ಥೆ ನಿಮಗೆ ಸಂಬಳ ನೀಡುತ್ತದೆ! ಎಷ್ಟೋ ಸೌಲಭ್ಯಗಳನ್ನು ಕೊಡುತ್ತದೆ! ನಿಮ್ಮ ಊಟ, ಬಟ್ಟೆ, ವಾಸ ಎಲ್ಲಕ್ಕೂ ನಿಮ್ಮ ಪೋಷಕರ ಸಂಬಳದಲ್ಲಿ ನಿಮ್ಮ ಪಾಲೂ ಸೇರಿದೆ. ವೈದ್ಯಕೀಯ ಸೌಲಭ್ಯ, ಔಷಧ ವೆಚ್ಚ, ಆಸ್ಪತ್ರೆ ಖರ್ಚುಗಳನ್ನು ಸರ್ಕಾರ, ಸಂಸ್ಥೆ ನಿಮಗೂ ನೀಡುತ್ತದೆ. ಎಲ್.ಟಿ.ಸಿ (ಪ್ರವಾಸ) ವೆಚ್ಚವನ್ನು ಸರ್ಕಾರ, ಸಂಸ್ಥೆ ನಿಮಗೂ ಭರಿಸುತ್ತದೆ. ಭವಿಷ್ಯ ನಿಧಿಯಲ್ಲಿ ನಿಮಗೂ ಪಾಲಿದೆ. ನಿಮ್ಮ ವಿದ್ಯಾಭ್ಯಾಸಕ್ಕೆ ಸರ್ಕಾರ ವಿಶೇಷ ಸೌಲಭ್ಯ ನೀಡುತ್ತದೆ. ಕೆಲಸದಲ್ಲಿದ್ದು